ಸಿ.ಸಿ.ನಂ.1528-2018

ಪಿ.ಡಬ್ಲು-2

ದಿ: 18.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>: ಆರೋಪಿ ಪರ ಶ್ರೀಯುತ ಜಿ.ಎ.ಎಸ್ ವಕೀಲರಿಂದ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಪಿರ್ಯಾದ್ದುದಾರರು ನನ್ನ ಅಳಿಯ. ನಾನು 2018 ನೇ ಸಾಲಿನಲ್ಲಿ ನನ್ನ ಅಳಿಯನ ಮನೆಗೆ ಹೋಗಿದ್ದೆ. ಆ ರೀತಿ 2018 ನೇ ಸಾಲಿನ ಯಾವ ದಿನಾಂಕದಂದು ಪಿರ್ಯಾದ್ದುದಾರರ ಮನೆಗೆ ಹೋಗಿದ್ದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಯುಗಾದಿ ಹಬ್ಬದ ಸಲುವಾಗಿ ಪಿರ್ಯಾದ್ದುದಾರರ ಮನೆಗೆ ಹೋಗಿರುವುದಾಗಿ ಕಾಣಿಸಿರುವುದಿಲ್ಲ. ಆ ರೀತಿ 2018 ನೇ ಸಾಲಿನಲ್ಲಿ ಯಾವ ಕಾರಣದ ಸಲುವಾಗಿ ಪಿರ್ಯಾದ್ದುದಾರರ ಮನೆಗೆ ಹೋಗಿದ್ದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಜಮೀನು ಮತ್ತು ಮನೆಯನ್ನು ಇಪ್ಪತ್ತೈದು ಲಕ್ಷಗಳಿಗೆ ಮಾರಾಟ ಮಾಡಿರುತ್ತೇನೆ. ಸದರಿ ಮನೆ ಮತ್ತು ಜಮೀನ್ನನ್ನು ಆರೋಪಿಯು ಮುಂದೆ ನಿಂತುಕೊಂಡು ಮಾರಾಟ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಜಮೀನು ಮಾರಾಟ ಮಾಡುವ ಪೂರ್ವದಲ್ಲಿ ಸೋಮಶೇಖರ್ ರವರಿಗೆ ಜಮೀನಿನ ಕುರಿತು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಸೋಮಶೇಖರ್ ರವರೊಂದಿಗೆ ಮಾಡಿಕೊಂಡಿದ್ದ ನೊಂದಾಯಿತ ಕ್ರಯದ ಕರಾರು ಪತ್ರವನ್ನು ರದ್ದು ಮಾಡಿ ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಜಮೀನುಗಳನ್ನು ಮಾರಾಟ ಮಾಡಿದ ನಂತರ ಮೈಸೂರು ಜಿಲ್ಲೆಯ ಟಿ.ನರಸಿಪುರ ತಾಲ್ಲೂಕಿನ ಒರಳಹಳ್ಳಿ ಗ್ರಾಮದಲ್ಲಿ ಎರಡು ಜಮೀನುಗಳನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಆರೋಪಿ ಸದರಿ ಓರಳಿ ಹಳ್ಳಿ ಗ್ರಾಮದ ಜಮೀನುಗಳನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

2. 2018 ನೇ ಸಾಲಿನಲ್ಲಿ ಆರೋಪಿ ನನ್ನ ಅಳಿಯನ ಬಳಿ ಬಂದು ಹಣ ಕೇಳಿರುತ್ತಾರೆ. ಆ ರೀತಿ ಆರೋಪಿಯು ನನ್ನ ಅಳಿಯನ ಮನೆಯಲ್ಲಿ ಹಣ ಕೇಳಿರುತ್ತಾರೆ. ಆ ರೀತಿ ಮಧ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ಆರೋಪಿ ಹಣ ಕೇಳಿರುತ್ತಾರೆ. ಆ ರೀತಿ ಆರೋಪಿಯು ನಮ್ಮ ಅಳಿಯನ ಮನೆಗೆ ಬಂದು ಹಣ ಕೇಳಿದ ಸಮಯದಲ್ಲಿ ನಾನು, ನನ್ನ ಮಗಳು, ನನ್ನ ಅಳಿಯ ಮತ್ತು ರಾಜ ಹಾಜರಿದ್ದರು. ಆ ರೀತಿ ಆರೋಪಿಯು ನನ್ನ ಅಳಿಯನ ಬಳಿ ರೂ.10,00,000/- ಹಣ ಕೇಳಿರುತ್ತಾರೆ. ಸದರಿ ದಿನ ನನ್ನ ಬಳಿ ಇದ್ದ ಆರು ಲಕ್ಷ ಹಣ ಮತ್ತು ನನ್ನ ಅಳಿಯನ ಬಳಿ ಇದ್ದ ಎರಡು ಲಕ್ಷ ಹಣ ಸೇರಿ ಒಟ್ಟು ಎಂಟು ಲಕ್ಷ ಹಣವನ್ನು ಅರೋಪಿಗೆ ನೀಡಿರುತ್ತೇವೆ. ಆ ರೀತಿ ನೀವು ನಿಮ್ಮ ಅಳಿಯನ ಮನೆಗೆ ಹೋಗುವ ಸಮಯದಲ್ಲಿ ಹಣ ತೆಗೆದುಕೊಂಡು ಹೋಗಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಣವನ್ನು ನನ್ನ ಅಳಿಯನ ಮನೆಯಲ್ಲಿಟ್ಟಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ಆರೋಪಿಯು ಹಣ ಪಡೆದುಕೊಳ್ಳುವ ಸಮಯದಲ್ಲಿ ಪತ್ರ ಮಾಡಿಕೊಟ್ಟಿರುತ್ತಾರೆ. ಆ ರೀತಿ ಯಾವ ಪತ್ರ ಮಾಡಿಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಸದರಿ ಪತ್ರಕ್ಕೆ ನನ್ನ ಅಳಿಯ ಮತ್ತು ರಾಜು ಸಹಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ನನ್ನ ಅಳಿಯ ಮತ್ತು ರಾಜು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುವುದಿಲ್ಲ. ಆರೋಪಿ ನಮ್ಮ ಸಂಬಂಧಿಕರಾಗಿರುತ್ತಾರೆ. ಸದರಿ ದಿನ ಎಂಟು ಲಕ್ಷ ಹಣವನ್ನು ಒಟ್ಟಿಗೆ ಆರೋಪಿಗೆ ನೀಡಿರುತ್ತೇವೆ. ಸದರಿ ದಿನ ಆರೋಪಿಯು ಪತ್ರ ಮತ್ತು ಎರಡು ಚೆಕ್ಕುಗಳನ್ನು ನೀಡಿರುತ್ತಾರೆ. ನಾನು ಮತ್ತು ನನ್ನ ಅಳಿಯ ಆರೋಪಿಗೆ ಯಾವುದೇ ಎಂಟು ಲಕ್ಷ ಹಣ ನೀಡಿರುವುದಿಲ್ಲ ಮತ್ತು ನಾನು ನನ್ನ ಅಳಿಯನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.

ಹೊಸಕೋಟೆ.